ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, Pp. 100-102
©*IIMRD*, Mysuru
IIMRD JOURNALS
www.iimrd.com

# ಮಹಾತ್ಮ ಗಾಂಧಿಯವರ ಜೀವನ ಮತ್ತು ಸಾಧನೆಯಲ್ಲಿ ಕಸ್ತೂರಬಾ ಗಾಂಧಿರವರ ಪಾತ್ರ

**ತಾಯಮ್ಮ***

*ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

## ಸಾರಾಂಶ (Abstract)

ಗಾಂಧೀಜಿ ತಮ್ಮ ಜೀವಿತ ಕಾಲದಲ್ಲಿಯೇ ಭಾರತದ ಅಂದಿನ ನಲವತ್ತು ಕೋಟಿ ಜನರ, ವಿದ್ಯಾವಂತರ, ಅವಿದ್ಯಾವಂತರ, ಹೆಂಗಸರ, ಮಕ್ಕಳ, ಹೃದಯವನ್ನು ತಟ್ಟಿದ, ಮಿಡಿದ ವ್ಯಕ್ತಿ; ಇಂಥವರು ಜಗತ್ತಿನ ಇತಿಹಾಸದಲ್ಲಿ ಸಿಗಲಾರರು; ಮುಂದೆ ಸಿಗುವರೆಂಬ ಭರವಸೆಯೂ ಇಲ್ಲ. ಗಾಂಧೀಜೀಯವರಲ್ಲಿದ್ದ ನಿರ್ಭಯತೆ, ಅಗಾಧ ಆತ್ಮ ಶಕ್ತಿ, ಅಸಾಧಾರಣ ಸಂಕಲ್ಪ ಶಕ್ತಿಗಳು ಈ ಆಧ್ಯಾತ್ಮ ಸಾಧನೆಯ ಫಲ ಪತ್ನಿಯ ಸಹಕಾರ ಪ್ರಮುಖವಾದುದು ಎಂಬುದರಲ್ಲಿ ಸಂಶಯವಿಲ್ಲ. ಪ್ರಸ್ತುತ ಲೇಖನದಲ್ಲಿ ಗಾಂಧೀಜಿಯವರ ವೈಯಕ್ತಿಕ ಜೀವನ ಮತ್ತು ಸಾಧನೆಯಲ್ಲಿ ಅವರ ಧರ್ಮಪತ್ನಿ ಕಸ್ತೂರಬಾ ಗಾಂಧಿರವರ ಪಾತ್ರವೇನು ಎಂಬುದನ್ನು ವಿಮರ್ಶಿಸಲಾಗಿದೆ

**ಮುಖ್ಯಪದಗಳು (Keywords): ಕಸ್ತೂರಬಾ, ಮಹಾತ್ಮ ಗಾಂಧಿ, ಸ್ವಾತಂತ್ರ್ಯ ಜೀವನ, ಸಾಧನೆ, ಚಳುವಳಿ.**

### ಪೀಠಿಕೆ

ಅಹಿಂಸೆ ಮತ್ತು ಶಾಂತಿ ಗಾಂಧೀಜಿಯವರ ಗುರಿಯಾಗಿತ್ತು. ದ್ವೇಷವಿಲ್ಲದ ಜಗತ್ತು ಅವರ ಕನಸಾಗಿತ್ತು. ಅವರ ಆದರ್ಶ, ರಾಮರಾಜ್ಯದ ಕನಸು, ಸ್ವಯಂ ಪರಿಪೂರ್ಣ ಗ್ರಾಮೀಣ ಆರ್ಥಿಕತೆ ಮುಂತಾದ ಸಂಕಲ್ಪಗಳಿಗೆ ಸಾವಿಲ್ಲ. ಮಹಾತ್ಮ ಗಾಂಧಿಯವರ ಸತ್ಯಾನ್ವೇಷಣೆ ಹಾಗೂ ಸರಳ ಜೀವನದ ಅನುಸರಣೆಯಾಗಿ ಬಂದ ಅವರ ಆಶ್ರಮ ಜೀವನ ಶೈಲಿ, ಅದರೊಂದಿಗೆ ಬೆರೆತ್ತಿದ್ದ ಸಮಾನತೆಯ ಕಳಕಳಿ, ಸಮಾಜ ಸೇವೆ ಇಂದಿಗೂ ಅನುಕರಣೀಯ ಯೋಗ್ಯ, ಮಹಾತ್ಮರ ಕನಸ್ಸಿನ ಗ್ರಾಮ ಸ್ವರಾಜ್ಯ, ಅಶಕ್ತರ, ಅಬಲರ, ಮಹಿಳೆಯರ ಉದ್ಧಾರಕ್ಕಾಗಿ ಅವರ ಜೀವನ ಸಂಗಾತಿ ಕಸ್ತೂರಬಾರವರ ಸ್ಮಾರಕವಾಗಿ ಸ್ಥಾಪನೆಗೊಂಡ ಸೇವಾ ಕೇಂದ್ರಗಳು ಭಾರತದ ಆಶಕ್ತ ಮಹಿಳೆಯರ ಬದುಕಿನಲ್ಲಿ ಆಶಾಕಿರಣವಾಗಿ ಸಾವಿರಾರು ಮಹಿಳೆಯರಿಗೆ, ಗ್ರಾಮಾಂತರ ಜನರಿಗೆ ಬದುಕುವ ಮಾರ್ಗೋಪಾಯಗಳನ್ನು ತೋರಿಸುವ ಅಮೂಲ್ಯ ಸೇವೆ ಸಲ್ಲಿಸುತ್ತಿವೆ. ಗುಜರಾತಿನ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ 1869ರ ಏಪ್ರಿಲ್ 11ರಂದು ಕಸ್ತೂರಬಾ ಜನಿಸಿದ್ದರು. ತಮ್ಮ ಹನ್ನೆರಡರ ಬಾಲ್ಯದಲ್ಲಿಯೇ ಗಾಂಧಿಯವರನ್ನು ವಿವಾಹವಾದ ಕಸ್ತೂರಬಾ

*Please cite this article as: ತಾಯಮ್ಮ. (2021).* ಮಹಾತ್ಮ ಗಾಂಧಿಯವರ ಜೀವನ ಮತ್ತು ಸಾಧನೆಯಲ್ಲಿ ಕಸ್ತೂರಬಾ ಗಾಂಧಿರವರ ಪಾತ್ರ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 100–102.*

ಅವರೆಲಾ ಚಟುವಟಿಕೆಗಳ ಸ್ಪೂರ್ತಿಯಾಗಿದ್ದರು. ಗಾಂಧೀಜಿಯವರು ಲಾ ಪದವಿಗೆ ಇಂಗ್ಲೇಂಡಿಗೆ ಹೋದ ಗಾಂಧೀಜಿಯವರನ್ನು ಅಗಲಿರಬೇಕಾದುದಲ್ಲದೆ, ಅವರ ಮಕ್ಕಳ ಯೋಗ ಕ್ಷೇಮವನ್ನು ನೋಡಿಕೋಳ್ಳುತ್ತಾ ತುಂಬು ಕುಟುಂಬದ ಜವಾಬ್ದಾರಿಯನ್ನು ಹೊರಬೇಕಿತ್ತು. ಮೋಹನ್‌ದಾಸರೇನೋ ಲಾ ಪದವಿಯೊಂದಿಗೆ ಹಿಂದಿರುಗಿದರು, ಅದರೆ ಮುಂಬಯಿಯಲ್ಲಿ ವಕೀಲ ವೃತ್ತಿಯನ್ನು ನಡೆಸುವ ಅವರ ಪ್ರಯತ್ನ ಯಶಸ್ಸು ಕಾಣಲಿಲ್ಲ. ಆದ್ದರಿಂದಾಗಿ ಕುಟುಂಬದ ಸ್ನೇಹಿತರ ವ್ಯವಹಾರಗಳನ್ನು ನಿರ್ವಹಿಸಲು ಮೋಹನ್‌ದಾಸರು ದಕ್ಷಿಣ ಆಫ್ರಿಕಾಕ್ಕೆ ತೆರಳಿದಾಗ ಕಸ್ತೂರಬಾ ಕೂಡ ಅವರೊಂದಿಗೆ ತೆರಳಿದರು.

ದಕ್ಷಿಣ ಆಫ್ರಿಕಾದಲಿದ್ದ ಕಸ್ತೂರಬಾಗೆ ತಮ್ಮ ಪತಿಯ ಪ್ರಯೋಗಗಳು ಅರ್ಥವಾಗುತ್ತಿರಲ್ಲಿಲ್ಲ. ತಮ್ಮ ಪತಿಯನ್ನು ಎಂತಹ ಪರಿಸ್ಥಿತಿಯಲ್ಲು ಅನುಸರಿಸಲು ಸಿದ್ದರಿದ್ದರೂ, ವರ್ಣ ವ್ಯವಸ್ಥೆಯ ವಿರುದ್ದ ಸಿಡಿದ್ದೆದ್ದ ಗಾಂಧೀಜಿಯವರ ನಡವಳಿಕೆ ಅವರಿಗೆ ಸಹ್ಯವಾಗುತ್ತಿರಲ್ಲಿಲ. ಆದ್ದರಿಂದ ಅವರಿಬ್ಬರ ನಡುವೆ ವಾಗ್ವಾದಗಳು ಸಾಮಾನ್ಯವಾಗಿತ್ತು. ವಿದೇಶಿಯರನ್ನಲ್ಲದೆ, ಅಸ್ಪೃಶ್ಯರನ್ನು ಗಾಂಧಿಯವರು ಅತಿಥಿಗಳಾಗಿ ಮನೆಗೆ ಕರೆ ತಂದಾಗ ಕಸ್ತೂರಬಾ ಸೌಮ್ಯವಾಗಿ ಪ್ರತಿಭಟಿಸಿದರು. ಆದರೆ ತಮ್ಮ ಪತಿಯ ಧೃಡ ನಿಶ್ಚಯದೆದುರು ಅವರೇನೂ ಮಾಡುವ ಹಾಗಿರಲ್ಲಿಲ. ಕಸ್ತೂರಬಾ ಬದಲಾಗಬೇಕಾಯಿತು, ಗಾಂಧಿಯವರ ಸರ್ವೋದಯದ ತತ್ವಗಳು ಅವರಿಗೆ ಅರ್ಥವಾಗಲು ಕಷ್ಟವಾಯಿತು.

ಗಾಂಧಿಯವರ ಪ್ರಥಮ ಶಿಷ್ಯೆ ಕಸ್ತೂರಬಾ. ಅವರೆಲ್ಲ ಪ್ರಯೋಗಗಳ ಗುರಿ ಕಸ್ತೂರಬಾ, ಏಕೆಂದರೆ ಅವರ ಯೋಜನೆಗಳೆಲ್ಲಾ ಅವರ ಮನೆಯಿಂದಲೆ ಆರಂಭಗೊಳ್ಳುತ್ತಿದವು, ಉತ್ತಮ ಶಿಕ್ಷಕರಾಗಿದ್ದ ಗಾಂಧಿಯವರು ಕಸ್ತೂರಬಾ ಅವರನ್ನು ತಮ್ಮ ಆದರ್ಶಗಳ ಪರಿಪಾಲನೆಗೆ ಸಿದ್ದಗೊಳಿಸಿದರು. ಏಕೆಂದರೆ ಅವರೆಲ್ಲಾ ಪ್ರಯೋಗಗಳು, ಆದರ್ಶಗಳು ಅವರ ಮನೆಯಿಂದಲೆ ಚರ್ಚೆಗೊಂಡು, ಪರಿಶೀಲನೆಗೆ ಒಳಪಟ್ಟು, ಆರಂಭಗೊಳ್ಳುತ್ತಿದ್ದವು, ಅದರಲ್ಲಿ ಕಸ್ತೂರಬಾ ಸಂಪೂರ್ಣ ಭಾಗಿಗಳಾಗಿರುತ್ತಿದ್ದರು. ಗಾಂಧೀಜಿಯವರ ಸಾಮೂಹಿಕ ಬದುಕಿನ ಚಿಂತನೆಯನ್ನು ಪ್ರಯೋಗಕ್ಕೆ ಒಳಪಡಿಸಿದ ಫೀನಿಕ್ಸ್ ಆಶ್ರಮದಲ್ಲಿ ಬಾ ಕೇವಲ ಒಬ್ಬ ಸ್ವಯಂ ಸೇವಕಿಯಾಗಬೇಕಿತ್ತು. ಆಶ್ರಮದ ನಿಯಮದಂತೆ ಎಲ್ಲರೂ ಎಲ್ಲಾ ಕೆಲಸಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕಿತ್ತು. ಅಲ್ಲಿಯೂ ಬಾ ರವರಿಗೆ ಇರುಸು ಮುರಿಸು ಉಂಟಾದ ಸನ್ನಿವೇಶಗಳಿದ್ದವು. ಗುಜರಾತಿನ ಸಂಪ್ರದಾಯ ಬದ್ಧ ಕುಟುಂಬದಿಂದ ಬಂದಿದ್ದ ಬಾ ಎಲ್ಲರಂತೆ ಚರಂಡಿಗಳ, ಶೌಚಾಲಯಗಳ, ಕೊಟ್ಟಿಗೆಗಳ ಶುಚಿತ್ವದಲ್ಲಿ ತೊಡಗಬೇಕಾಯಿತು. ಆಶ್ರಮದ ಬದುಕೆಂದರೆ ಅತ್ಯಂತ ಕನಿಷ್ಠ ಅವಶ್ಯಕತೆಗಳಿಗೆ ಮಾತ್ರ ಅವಕಾಶವಿದ್ದು ಸಾಮೂಹಿಕ ಬದುಕಿಗೆ ಆದ್ಯತೆ, ಸ್ವಂತಕ್ಕೆಂದು ಏನ್ನನೂ ಕೂಡಿಡುವಂತಿರಲ್ಲಿಲ್ಲ. ಕಸ್ತೂರ ಬಾ ಅವರಿಗೂ ಇದು ಅನ್ವಯಿಸುತ್ತಿತು. ಅದರಲ್ಲಿ ಅವರದೇನೂ ವಿಶೇಷತೆ ಇರಲ್ಲಿಲ.

ಆಶ್ರಮದ ಮುಖ್ಯಸ್ಥನ ಧರ್ಮಪತ್ನಿಯಾಗಿ ಅವರ ಜವಾಬ್ದಾರಿ ಮತ್ತಷ್ಟು ಗುರುತರ. ಆಶ್ರಮದ ಎಲ್ಲರ ಯೋಗಕ್ಷೇಮ ಕಸ್ತೂರ ಬಾ ರವರ ಜವಾಬ್ದಾರಿಯಾಗಿತ್ತು. ಇಂತಹ ಸ್ಥಿತಿಗೆ ಹೊಂದಿಕೊಳ್ಳಲು ಕಸ್ತೂರ ಬಾ ಅವರಿಗೆ ಕಷ್ಟವಾಗಿರಬಹುದು. ಆದರೆ ಕಸ್ತೂರ ಬಾ ಎಂದೂ ತಮ್ಮ ಜವಾಬ್ದಾರಿಯಿಂದ ಹಿಂಜರಿಯಲ್ಲಿಲ. ತಮ್ಮ ಪತಿಯ ಸ್ಥಾನಕ್ಕೆ, ಗೌರವಕ್ಕೆ, ಚ್ಯುತಿಬರುವಂತೆ ಎಂದೂ ನಡೆದುಕೊಳ್ಳಲ್ಲಿಲ. ತಮ್ಮ ಸಾಂಸ್ಕೃತಿಕ ಹಿನ್ನೆಲೆಗಿಂತ ಭಿನ್ನವಾದ ಪರಿಸ್ಥಿತಿಗೆ ಹೊಂದಿಕೊಳ್ಳಲು, ತಮ್ಮನ್ನು ಸದಾ ಬದಲಾವಣೆಯ ಗುರಿಯಾಗಿಸಿದ್ದ ತಮ್ಮ ಪತಿ ತಮ್ಮ ಮೇಲಿಟ್ಟಿದ್ದ ನಂಬಿಕೆಯನ್ನು ಹುಸಿಗೊಳಿಸದ ಒಬ್ಬ ಆದರ್ಶಮಯ ಭಾರತೀಯ ನಾರಿ ಕಸ್ತೂರ ಬಾ. ಆದ್ದರಿಂದಲೇ ಅವರು ಗಾಂಧೀಜಿಯವರ ಅನುಯಾಯಿಗಳ ಮೆಚ್ಚಿನ ಬಾ ಆದರು. ಅನೇಕರಿಗೆ ಅವರು ಮಾತೃ ಸ್ವರೂಪಿಯಾದರು. ಗಾಂಧೀಜಿಯವರ ತ್ಯಾಗ–ಬಲಿದಾನಗಳನ್ನು ಸರಿಗಟ್ಟಿದ ತ್ಯಾಗಮಯ ಜೀವನ ಅವರದು.

1915ರಲ್ಲಿ ಭಾರತಕ್ಕೆ ಬಂದ ಗಾಂಧೀಜಿಯವರ ದಿನಚರಿಯಲ್ಲಿ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಅದು ಇನ್ನೂ ಸಂಕೀರ್ಣವಾಯಿತೆನ್ನಬಹುದು. ಇಡೀ ಭಾರತ ಉಪಖಂಡವನ್ನೆ ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡ ಮಹಾತ್ಮರ ಹೆಜ್ಜೆಯ ಜಾಡು ಹಿಡಿದು ನಡೆಯಬೇಕಾದುದಲ್ಲದೆ. ಕಸ್ತೂರಬಾ ಅವರಿಗೆ ಈ ಎಲ್ಲಾ ಸಾರ್ವಜನಿಕ ಚಟುವಟಿಕೆಗಳ ನಡುವೆ ತಮ್ಮ ಮಕ್ಕಳನ್ನು ಸಾಕುವ ಹೊಣೆಗಾರಿಯಿತ್ತು. ಅವರ ಕುಟುಂಬವೆಂದರೆ ವಿಸ್ತೃತವಾಗಿದ್ದ ಅವರ ಶಿಷ್ಯ ಸಮೂಹ. ಕೂಡು ಕುಟುಂಬದ ಪರಿಚಯವಿದ್ದರೂ, ದೇಶದ ವಿವಿಧ ಭಾಗಗಳಿಂದ ಆಶ್ರಮಕ್ಕೆ ಬರುತಿದ್ದವರ ಜೊತೆಗೆ ಕುಟುಂಬದ ಮುಖ್ಯಸ್ಥೆಯಾಗಿ ನಡೆದುಕೊಳ್ಳುತ್ತಾ ಅವರೆಲ್ಲಾ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಅವರ ಅವಶ್ಯಕತೆಗಳ ಕಡೆ ಗಮನವೀಯುತ್ತಾ ಕಸ್ತೂರ ಬಾ ತಮ್ಮ ಸುಖವನ್ನು ಕಾಣಬೇಕಾಯಿತು. ಸಾರ್ವಜನಿಕ ಸೇವೆಯಲ್ಲಿ ಪ್ರಾರ್ಥನಾ ಸಭೆಗಳಲ್ಲಿ ಮುಂಚೂಣಿಯಲ್ಲಿದ್ದು, ಮಹಿಳಾ ಅನುಯಾಯಿಗಳ ಪ್ರೀತಿಯಾ ಕಸ್ತೂರ ಬಾ ಅದರು.

**ಉಪಸಂಹಾರ**

ಗಾಂಧೀಜಿ ಮತ್ತು ಕಸ್ತೂರ ಬಾರವರ ಜೀವನವು ಸುಖಮಯಾವಾಗುತ್ತು. ಕಸ್ತೂರ ಬಾ ಮಹಾತ್ಮ ಗಾಂಧೀಜಿಯವರಿಗೆ ಗೆಳತಿಯೂ, ನೆಚ್ಚಿನ ಸಂಗಾತಿಯು ಆಗಿದ್ದರು. ಕಸ್ತೂರ ಬಾ ತನ್ನ ತನವನ್ನು ಉಳಿಸಿಕೊಂಡೆ ಮಹಾತ್ಮ ಗಾಂಧೀಜಿಯ ನೆರಳೂ ಆಗಿದ್ದಂತಹ ಅಸಾಧಾರಣ ಹೆಣ್ಣು ದೇಶದ ಅತ್ಯಂತ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ವಿಶ್ವದ ಪ್ರಮುಖ ನೇತಾರನೊಬ್ಬನ ಹೆಗಲಿಗೆ ಹೆಗಲು ಕೊಟ್ಟು ಜೊತೆ ನಡೆದ ಈ ವಿಸ್ಮಯಕಾರಿ ಕಸ್ತೂರಬಾ ಗಾಂಧಿ ಎಂದು ಹೇಳಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಕಮಲಾ ಸಂಪಳ್ಳಿ (ಮಾರ್ಚ್ 7, 2020). ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕನ್ನಡತಿಯರು. ವಿಜಯವಾಣಿ ದಿನಪತ್ರಿಕೆ, ಬೆಂಗಳೂರು.
- ಮಲ್ಲಿಕಾ.ಎಸ್.ಘಂಟಿ. (2018). ಗಾಂಧಿ, ಕಸ್ತೂರಬಾ ಗಾಂಧಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವೈದೇಹಿ. (1984). ಭಾರತಿಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ. ಅಂಕಿತ ಪ್ರಕಾಶನ, ಬೆಂಗಳೂರು.
- ಸೂರ್ಯನಾಥ್ ಕಾಮತ್ (ಸಂ). ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು.